ಆ) ಮೇಲಿನ ವಿಷಯದಲ್ಲಿ ನಿರ್ಧಾರವನ್ನು ಕೈಗೊಂಡ ಕೂಡಲೇ ಕೆಲಸವನ್ನು ಪ್ರಾರಂಭಿಸಲಾಗುವುದು.

ರಾಜ್ಯದಲ್ಲಿ ನಡೆದಿರುವ ಕೊಲೆ, ಸುಲಿಗೆ ಇನ್ನಿತರ ಪ್ರಕರಣಗಳ ಬಗ್ಗೆ.

೪. ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಳೆದ ಮೂರು ತಿಂಗಳಲ್ಲಿ ರಾಜ್ಯದಲ್ಲಿ ನಡೆದಿರುವ ಕೊಲೆ, ಸುಲಿಗೆ, ಅತ್ಯಾಚಾರ, ದರೋಡೆ ಹಾಗೂ ಇನ್ನಿತರ ಪ್ರಕರಣಗಳ ಸಂಖ್ಯೆ ಎಷ್ಟು ?

ಆ) ಹಾಗಿದ್ದಲ್ಲಿ ಸದರಿ ಪ್ರಕರಣಗಳನ್ನು ಪತ್ತೆ ಹಚ್ಚಲು ಮತ್ತು ತಡೆಗಟ್ಟಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಆರ್. ಎಲ್. ಜಾಲಪ್ಪ (ಗೃಹ ಮಂತ್ರಿಗಳು).—

ಅ) ವಿವರಗಳು ಈ ಕೆಳಕಂಡಂತಿವೆ.

ಕೊಲೆ	...	...	೨೮೧
ಸುಲಿಗೆ	...	...	೧೨೧
ಅತ್ಯಾಚಾರ	...	...	೪೦
ದರೋಡೆ	...	...	೩೧
ಇತರೆ ಐಪಿಸಿ ಪ್ರಕರಣಗಳು	...	...	೧೧,೮೪೯

ಆ) ಎಲ್ಲ ಜಿಲ್ಲಾ ಪೋಲೀಸ್ ಅಧಿಕಾರಿಗಳಿಗೆ ಸಂಶಯಾತ್ಮಕ ವ್ಯಕ್ತಿಗಳನ್ನು ಪರಿಶೀಲಿಸಲು ಹಾಗೂ ನಾಕಾಬಂದಿ ಏರ್ಪಡಿಸಲು ಆದೇಶಿಸಲಾಗಿದೆ. ರಾಷ್ಟ್ರೀಯ ಹೆದ್ದಾರಿಗಳಲ್ಲಿ ದರೋಡೆಗಳನ್ನು ತಡೆಗಟ್ಟಲು ಸಿವಿಲ್ ಪೋಲೀಸ್ ಮತ್ತು ಸಶಸ್ತ್ರ ಪಡೆಯ ವಿಶೇಷ ಗಸ್ತನ್ನು ಏರ್ಪಡಿಸಲಾಗಿದೆ. ಬೆಂಗಳೂರು ನಗರ ಹಾಗೂ ಹೊರ ವಲಯಗಳಲ್ಲಿ ಪೋಲೀಸ್ ಶ್ವಾನದಳ ಹಾಗೂ ನಿಸ್ತಂತು ಸೌಲಭ್ಯ ವಿರುವ ವಾಹನಗಳನ್ನು ಕೊಡಲಾಗಿದೆ. ಪ್ರತಿ ರಾತ್ರಿ ಪರಿಣಾಮಕಾರಿ ಗಸ್ತು ತಿರುಗಲು ಡಿಸಿಪಿಯವರ ನೇತೃತ್ವದಲ್ಲಿ ಗಸ್ತನ್ನು ಏರ್ಪಡಿಸಲಾಗಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ನೀಡಲಾದ ಉತ್ತರಗಳು

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳನ್ನು ಸಭೆಯ ಮುಂದೆ ಇಡುತ್ತೇನೆ.

ಅಧ್ಯಕ್ಷರು.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳನ್ನು ಸಭೆಯ ಮುಂದಿಡಲಾಯಿತು.

ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರದಿಂದ ತೆರಿಗೆ ಕೊಟ್ಟಿರುವ ಬಗ್ಗೆ.

೫೭. ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೫-೮೬ ಹಾಗೂ ೮೬-೮೭ನೇ ಸಾಲುಗಳ ರಾಜ್ಯದಿಂದ ಕೇಂದ್ರ ಸರ್ಕಾರಕ್ಕೆ ಕೊಟ್ಟ ತೆರಿಗೆ ಹಣ ಎಷ್ಟು ?

ಆ) ಯಾವ ಯಾವ ಬಾಬ್ತು ರಾಜ್ಯದಿಂದ ಕೇಂದ್ರ ಸರ್ಕಾರಕ್ಕೆ ಹಣವನ್ನು ತೆರಿಗೆ ರೂಪದಲ್ಲಿ ಕೊಡಲಾಗುತ್ತಿದೆ.

ಶ್ರೀ ರಾಮಕೃಷ್ಣ ಹೆಗಡೆ(ಮುಖ್ಯಮಂತ್ರಿಗಳು).—

ಅ) ೧೯೮೫-೮೬ ಹಾಗೂ ೮೬-೮೭ನೇ ಸಾಲಿನಲ್ಲಿ ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ತೆರಿಗೆ ರೂಪದಲ್ಲಿ ಯಾವ ಹಣವನ್ನು ನೀಡಿಲ್ಲ.

ಆ) ಉದ್ಭವಿಸುವುದಿಲ್ಲ.

ಕೇಂದ್ರ ಸರ್ಕಾರದಿಂದ ಬಂದ ಹಣ

೫೭೮ ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ) — ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೮೪-೮೫, ೧೯೮೫-೮೬ ಮತ್ತು ೧೯೮೬-೮೭ನೆಯ ಸಾಲುಗಳಲ್ಲಿ ರಾಜ್ಯ ಸರ್ಕಾರಕ್ಕೆ ಬಂದಿರುವ ಹಣದ ಮೊತ್ತವೆಷ್ಟು ?

ಆ) ಸದರಿ ಹಣವನ್ನು ಯಾವ ಯಾವ ಇಲಾಖೆಗೆ ಎಷ್ಟೆಷ್ಟು ಕೊಡಲಾಗಿದೆ ?
(ವಿವರ ನೀಡುವುದು).

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿ).—

ಅ) ೧೯೮೪-೮೫ ರಿಂದ ೧೯೮೬-೮೭ ರವರೆಗೆ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಬಂದಿರುವ ಹಣದ ಮೊತ್ತ ಈ ಕೆಳಗಿನಂತೆ ಇದೆ :—

(ಕೋಟಿ ರೂ.ಗಳಲ್ಲಿ)

	೧೯೮೪-೮೫	೧೯೮೫-೮೬	೧೯೮೬-೮೭
		(ಪೂರ್ವಭಾವಿ ಲೆಕ್ಕಗಳು)	
(೧) ಕೇಂದ್ರ ತೆರಿಗೆಗಳ ರಾಜ್ಯದ ಪಾಲು	೨೯೯.೧೦	೩೫೬.೪೪	೪೮೩.೮೮
(೨) ಸಹಾಯ ಧನ	೪೩೬.೭೧	೮೦೮.೩೨	೬೧೭.೦೩
ಜುಮ್ಲಾ :	೭೩೫.೮೪	೧೧೫೯.೪೬	೧೦೨೦.೯೧

ಆ) ಕೇಂದ್ರ ಸರ್ಕಾರದಿಂದ ಸ್ವೀಕೃತಿಯಾದ ಹಣವನ್ನು ಇಲಾಖೆಗಳಿಗೆ ಬಿಡುಗಡೆ ಮಾಡಿರುವ ವಿವರಗಳು. ವಿವರಣಾ ಪಟ್ಟಿ ೧ ಮತ್ತು ೨ರಲ್ಲಿ ನಮೂದಿಸಲಾಗಿದೆ. ಕೇಂದ್ರ ಸರ್ಕಾರದಿಂದ ಕೇಂದ್ರ ಪುರಸ್ಕೃತ ಮತ್ತು ಕೇಂದ್ರವಲಯ ಯೋಜನೆಗಳಿಗೆ ಪಡೆದ ಸಹಾಯ ಧನವನ್ನು ಸಂಬಂಧಪಟ್ಟ ಇಲಾಖೆಗಳಿಗೆ ಬಿಡುಗಡೆ ಮಾಡಲ್ಪಡುತ್ತದೆ. ಕೇಂದ್ರ ತೆರಿಗೆಗಳ ರಾಜ್ಯದ ಪಾಲು, ರಾಜ್ಯ ವಾರ್ಷಿಕ ಯೋಜನೆ ಮತ್ತು ಸಣ್ಣ ಉಳಿತಾಯದಿಂದ ಬಂದ ಹಣದ ಪಾಲು ಇವುಗಳು ರಾಜ್ಯದ ಆದಾಯದ ಒಂದು ಭಾಗವಾಗಿರುತ್ತದೆ.